ದಿನಾಂಕ 08-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ. ಎಸ್. ವಿ. ಪಿ. ಆರೋಪಿ ಪರ ವಕೀಲರಿಂದಃ-**

1. ಘಟನೆ ನಡೆದ ನಿರ್ಧಿಷ್ಟ ದಿನಾಂಕವನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ಚಾಸಾ-8 ವೀರೇಶ ತಂದೆ ನರಸಪ್ಪರವರಿಗೆ ನೀರು ಬಿಡಲು ಹೇಳಿದ ನಿರ್ಧಿಷ್ಟ ದಿನಾಂಕವನ್ನು ಹೇಳಲು ಆಗುವುದಿಲ್ಲ ಎಂದರೆ ಸರಿ. ಚಾಸಾ-8 ರವರ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ಆದರೆ ಒಂದೂವರೆ ಎಕರೆ ಭೂಮಿ ಇದೆ. ನಾನು ಅವರ ಪಹಣಿಯನ್ನು ನೋಡಿಲ್ಲ.

2. ಚಾಸಾ-8 ರವರ ಹೊಲದ ಪಕ್ಕದಲ್ಲಿ ಚಾಸಾ-1 ರವರ ಹೊಲ ಇದೆ ಎಂದರೆ ಸರಿ. ಚಾಸಾ-8 ರವರ ಹೊಲದಲ್ಲಿ ಕೆನಾಲ್ ಮತ್ತು ಬೋರ್ ವೆಲ್ ಇದೆ, ನೀರಿ ಹರಿಯುತ್ತದೆ ಎಂದರೆ ಸರಿ. ಆ ನೀರು ಅವರ ಹೊಲಕ್ಕೆ ಮತ್ತು ಲೀಸ್ ಹೊಲಕ್ಕೆ ಸಾಕಾಗುತ್ತದೆ ಎಂದರೆ ಸರಿ.

3. ಶಂಕ್ರಯ್ಯ ಸ್ವಾಮಿರವರ ಹೊಲವನ್ನು ಗುತ್ತಿಗೆಯ ಆಧಾರದ ಮೇಲೆ 15 ವರ್ಷಗಳಿಂದ ನಾನು ಮಾಡುತ್ತಿದ್ದೆ. ಅದರ ಸರ್ವೆ ನಂಬರನ್ನು ನಾನು ಹೇಳಿ ಬರೆಸಿಲ್ಲ. ನನಗೆ ಸರ್ವೆ ನಂಬರ್ ಗೊತ್ತಿಲ್ಲ. ಅವರ ಹತ್ತಿರ ನಾನು ಯಾವುದೇ ಗುತ್ತಿಗೆ ಪತ್ರವನ್ನು ಬರೆಸಿಕೊಂಡಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿ.

4. ಆರೋಪಿತರನ್ನು ನೀರು ಕೊಡಿ ಎಂದು ಕೇಳಿದ ನಿಖರವಾದ ದಿನಾಂಕವನ್ನು ಹೇಳಲು ನನಗೆ ಗೊತ್ತಿಲ್ಲ.

5. ನನ್ನ ಮುಖ್ಯವಿಚಾರಣೆಯಲ್ಲಿ ಎಲ್ಲಾ ಆರೋಪಿತರು ಕೈಗಳಿಂದ ಚಾಸಾ-1 ರವರಿಗೆ ಹೊಡೆದಿದ್ದರು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ನಾವು ಬಿಡಿಸಲು ಹೋದಾಗ ನಮಗೂ ಸಹ ಮುಖಕ್ಕೆ ಹೊಡೆದರು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

6. 2ನೇ ಆರೋಪಿ ಚಾಸಾ-3 ರವರ ಸೀರೆ ಹಿಡಿದು ಎಳೆದಾಡಿದಾಗ, ಸೀರೆ ಮತ್ತು ಸೆರಗು ಎರಡೂ ಹರಿದಿತ್ತು ಎಂದರೆ ಸರಿ. ಸದರಿ ಸೀರೆಯನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ಪೋಲೀಸರು ಸದರಿ ಸೀರೆ ಕೊಡುವಂತೆ ಕೇಳಿಲ್ಲ.

7. ಚಾಸಾ-1 ರವರ ಹೊಲದಲ್ಲಿ ಕೆನಾಲ್ ಮತ್ತು ಬೋರ್‌ವೆಲ್ ಇರುವುದರಿಂದ ಅವರಿಗೆ ಬೇರೆಯವರ ಹೊಲದ ನೀರಿನ ಅವಶ್ಯಕತೆ ಇಲ್ಲ ಎಂದರೆ ಸರಿ.

8. ಅಂಬಾಮಠದ ಹತ್ತಿರ ಇರುವಂತಹ ಕಂಕರ್ ಮಿಷನ್ ಕಲ್ಲುಗಳನ್ನು ಹೊಡೆಯುವ ಮಿಷನ್ ಇದೆ ಎಂದರೆ ಸರಿ. ಮಿಷನ್‌ನಿಂದ ಕಲ್ಲನ್ನು ಸಿಡಿಸಿದಾಗ, ಕಲ್ಲುಗಳು ನಮ್ಮ ಊರಿನಲ್ಲಿ ಬಂದು ಬಿದ್ದಿರುತ್ತವೆ ಎಂದರೆ ಸರಿ. ಮು. ಮಾ. 1 ರಿಂದ 3 ಗಳು ಇವೆ ಕಲ್ಲುಗಳು ಎಂದರೆ ಸರಿ.

9. ಬೇರೆಯವರ ಹೊಲದಲ್ಲಿ ಅವರನ್ನು ಕೇಳದೇ, ವಿಚಾರ ಮಾಡದೇ, ಅವರ ಒಪ್ಪಿಗೆ ಇಲ್ಲದೆ ಹೋಗುವುದು ಅಪರಾಧ ಎಂದರೆ ಸರಿ.

10. 1 ನೇ ಆರೋಪಿ ಹೊಲವನ್ನು ಗುತ್ತಿಗೆಯ ಆಧಾರದ ಮೇಲೆ ಮಾಡುತ್ತಾನೆ ಎಂದರೆ ಸರಿ. ಸದರಿ ಹೊಲದಲ್ಲಿ ಪಂಪ್‌ಸೆಟ್ ಆನ್ ಮಾಡಿಕೊಳ್ಳುತ್ತೇವೆ ಎಂದು ನೀವು, ಚಾಸಾ-3 & 4 ರವರು ಹೋಗಿ ಕೇಳಿರುತ್ತೀರಾ ಎಂದರೆ ಸಾಕ್ಷಿಯು ಕೇಳಿದ್ದೆವು ಎನ್ನುತ್ತಾರೆ. ಕೇಳಿದ ದಿನಾಂಕವನ್ನು ಹೇಳಲು ಆಗುವುದಿಲ್ಲ. ಅವರ ಹೊಲದಲ್ಲಿಯೇ ಹೋಗಿ ಕೇಳಿದ್ದೆವು. ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

11. ಸುಳ್ಳು ದೂರು ಕೊಟ್ಟರೆ ಆರೋಪಿಯು ಮಾಡುವ ಗುತ್ತಿಗೆಯ ಹೊಲದಿಂದ ಆತನನ್ನು ಬಿಡಿಸಬಹುದು ಎಂದು ಈ ರೀತಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. 1 & 2 ನೇ ಆರೋಪಿತರು ಚಾಸಾ-1 ರವರಿಗೆ ಕಲ್ಲಿನಿಂದ ಎದೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಕೈಗಳಿಂದ ಚಾಸಾ-1 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಬಿಡಿಸಲು ಹೋದ ನಮಗೆ ಮುಖಕ್ಕೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ರವರ ಮೈಮೇಲಿನ ಸೀರೆ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ.

12. ಚಾಸಾ-7 ಶಂಭುಲಿಂಗಯ್ಯ ತಂದೆ ರಾಮಣ್ಣರವರ ಹೊಲ 1 ನೇ ಆರೋಪಿ ಲೀಜ್ ಮಾಡುವ ಹೊಲದ ಹತ್ತಿರ ಇಲ್ಲ. ಚಾಸಾ-7 & 8 ರವರು ಜಗಳ ಬಿಡಿಸಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಚಾಸಾ-4 ರವರ ಬೆನ್ನಿಗೆ ಕೈಯಿಂದ ಗುದ್ದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ, ಆರೋಪಿತರು ನಮಗೆ ಹೊಡೆದಿಲ್ಲ, ಜಗಳ ಮಾಡಿಲ್ಲ, ಜೀವದ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

13. ನಾನು ಮತ್ತು ಆರೋಪಿತರು ಸಂಬಂಧಿಕರು/ಬೀಗರು ಎಂದರೆ ಸರಿ. ನಿಮ್ಮ ಮತ್ತು ಆರೋಪಿತರ ನಡುವೆ ಹಳೆಯ ವೈಷಮ್ಯ ಇರುವುದರಿಂದ ಈ ರೀತಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ.,ಸಿಂಧನೂರು.**